

ಸಂಖ್ಯೆಯಲ್ಲಿ ಕಥಕಳಿ ಕಲಿಯಲು ಮುಂದೆ ಬರುತ್ತಿದ್ದಾರೆ. ಆದರೆ, ಅವರಿಗೆ ಕಥಕಳಿಯಿಂದ ಬದುಕು ಕಟ್ಟಲು ಸಾಧ್ಯವಾಗುತ್ತಿಲ್ಲ. ಇತರ ಕಲಾಪ್ರಕಾರಗಳಿಗೆ ಹೋಲಿಕೆ ಮಾಡಿದರೆ ಶಾಸ್ತ್ರೀಯ ಕಲಾಪ್ರಕಾರಗಳನ್ನು ನಂಬಿಕೊಂಡು ಜೀವನ ಮಾಡುವುದು ಸಾಧ್ಯವೇ ಎಂಬ ಪ್ರಶ್ನೆ ಎದುರಾಗುತ್ತದೆ. ಉದಾರಹಣೆಗೆ ಹೇಳುವುದಾದರೆ, ನಟ ಮೋಹನ್ ಲಾಲ್ ಅವರೊಡನೆ ಒಂದು ಚಿತ್ರದಲ್ಲಿ ನಾನು ನಟಿಸುವ ಅವಕಾಶ ಸಿಕ್ಕಿತು. ಅದೊಂದು ಕೆಲವೇ ನಿಮಿಷಗಳ ಪಾತ್ರವಷ್ಟೇ. 'ವಾನಪ್ರಸ್ಥ' ಎಂಬ ಆ ಚಿತ್ರದಲ್ಲಿ ಮಾಡಿದ ಮೂರು ನಿಮಿಷಗಳ ಪಾತ್ರಕ್ಕೆ ನನಗೆ ಲಭಿಸಿದ ಸಂಭಾವನೆ 50 ಸಾವಿರ ರೂಪಾಯಿಗಳು. ಆದರೆ, ಮೂರು-ನಾಲ್ಕು ಗಂಟೆ ಕಾಲ ಕಥಕಳಿ ಪ್ರದರ್ಶನ ನೀಡಿದರೆ ಅದರ ಅರ್ಧಪಾಲು ಸಿಗುವುದೇ ಕಷ್ಟ. ಈ ಎಲ್ಲ ಹಣಕಾಸಿನ ವಿಚಾರಗಳು ಯುವಜನರನ್ನು ಕಾಡಿದರೆ ಈ ಕಲೆಯ ಕಲಿಕೆ ಕಷ್ಟವೇ ಸರಿ. ಇದು ಹಣದ ಥೈಲಿಯ ಮೂಲಕ ತೂಗಿ ನೋಡುವ ಕಲೆಯಲ್ಲ.

ಕಥಕಳಿ ಕೇರಳದ ಅನನ್ಯ ಸಂಸ್ಕೃತಿಯನ್ನು ಬಿಂಬಿಸುವ ಕಲೆ. ಇಂದು ಇದು ವಿಶ್ವಖ್ಯಾತಿ ಪಡೆದಿದೆ. ನಾವು ಇದನ್ನು ಪ್ರೋತ್ಸಾಹಿಸದಿದ್ದರೆ ಏನಾಗಬಹುದು? ಹಿಂದೆ ಮುಖ್ಯಮಂತ್ರಿಯಾಗಿದ್ದ ಇ.ಕೆ. ನಾಯನಾರ್ ಅವರು ಒಮ್ಮೆ ತಮಾಷೆ ರೂಪದಲ್ಲಿ ಹೇಳಿದ್ದು ಈಗ ನೆನಪು ಬರುತ್ತದೆ: 'ಸಿನಿಮಾದಿಂದ ಬೇಕಾದಷ್ಟು ಹಣ ಬರುತ್ತದೆ. ಕಥಕಳಿಯಿಂದ ಸರ್ಕಾರಕ್ಕೆ ಯಾವ ವರಮಾನವೂ ಬರುವುದಿಲ್ಲ. ಮತ್ತೆ ಹೇಗೆ ಪ್ರೋತ್ಸಾಹಿಸುವುದು?' ಸರ್ಕಾರದ ಈ ಧೋರಣೆ ಬದಲಾಗದಿದ್ದರೆ ಕಥಕಳಿಯ ಸಂಕಷ್ಟ ಹೆಚ್ಚುತ್ತದೆ. ಸುಮಾರು ವರ್ಷಗಳ ಹಿಂದೆ ಕಲಾಮಂಡಲನಲ್ಲಿ ಕಥಕಳಿ ಅಭ್ಯಾಸ ಮಾಡಿ ಹೆಸರು ಗಳಿಸಿದ್ದ ಒಬ್ಬ ಯುವಕ ಅಂದಿನ ಪ್ರಧಾನ ಮಂತ್ರಿಯವರ ಭದ್ರತಾ ಕಾವಲುಗಾರನಾಗಿ ದೆಹಲಿಯಲ್ಲಿ ಕೆಲಸಕ್ಕೆ ಸೇರಿದ್ದ. ಹೀಗೆ ಆದರೆ ಕಥಕಳಿಯ ಗತಿ ಏನಾಗಬಹುದು? ನಮ್ಮ ಪಠ್ಯದಲ್ಲಿ ಕಥಕಳಿ ಕಲಿಕೆಯನ್ನು ಸೇರಿಸಬೇಕು. ಕಲಿಸಲು ಕಥಕಳಿಯಲ್ಲಿ ತರಬೇತಿ ಪಡೆದ ಕಲಾವಿದರನ್ನು ಅಧ್ಯಾಪಕರನ್ನಾಗಿ ನೇಮಿಸಬೇಕು. ಹೀಗೆ ಮಾಡಿದರೆ ಮಕ್ಕಳು ಕಥಕಳಿ ಕಲಿಯಲು ಮುಂದೆ ಬರುತ್ತಾರೆ ಹಾಗೂ ಕಲಿತ ವಿದ್ಯಾರ್ಥಿಗಳಿಗೆ ಒಳ್ಳೆಯ ಕೆಲಸವೂ ಸಿಗುತ್ತದೆ. ಈ ನಿಟ್ಟಿನಲ್ಲಿ ನಮ್ಮ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕು.

◆ **ಸಿನಿಮಾ ನೋಡ್ತೀರಾ?**

ಸಿನಿಮಾಗಳನ್ನು ಆಗಾಗ ನೋಡುತ್ತೇನೆ. ಕಲಾಮಂಡಲದಲ್ಲಿ ಇದ್ದಾಗ ದಿನಕ್ಕೆ ಮೂರು ಸಿನಿಮಾ ನೋಡಿದ್ದೂ ಉಂಟು. ಈಗ ವಿಶ್ರಾಂತ ಜೀವನದಲ್ಲಿ ಕ್ರಿಕೆಟ್ ನೋಡ್ತೇನೆ. ಮೊಮ್ಮಕ್ಕಳೊಡನೆ ಕ್ರಿಕೆಟ್ ಆಡ್ತೇನೆ ಕೂಡ. ಧಾರಾವಾಹಿಗಳನ್ನೂ ನೋಡ್ತೇನೆ. ಕ್ರಿಕೆಟ್ ನನಗೆ ಬಹಳ ಇಷ್ಟ. ಹಿಂದೆ ಪ್ರವಾಸಗಳಿದ್ದಾಗ ಕ್ರಿಕೆಟ್ ನೋಡುವುದು ಸಾಧ್ಯವಾಗುತ್ತಿರಲಿಲ್ಲ. ಸಾಧ್ಯವಾದಷ್ಟು ಮಟ್ಟಿಗೆ ಕ್ರಿಕೆಟ್ ನೋಡುವ ಅವಕಾಶವನ್ನು ತಪ್ಪಿಸಿಕೊಳ್ಳುವುದೇ ಇಲ್ಲ. ಮ್ಯಾಚ್‌ಗಳಿದ್ದಾಗ ಟೀವಿ ಮುಂದೆಯೇ ಕುಳಿತುಬಿಡುತ್ತೇನೆ. ನನ್ನ ಸ್ನೇಹಿತರು-ಮಕ್ಕಳು, 'ಟೀವಿ ನೋಡಿದ್ದು ಸಾಕು' ಎನ್ನುತ್ತಾರೆ. ನೀವೇ ಹೇಳಿ ಮ್ಯಾಚ್ ನಡೆಯುವಾಗ ಅರ್ಧದಿಂದಲೇ ಎದ್ದು ಬರುವುದು ಸಾಧ್ಯವಾಗುತ್ತದಾ? ತೆಂಡೂಲ್ಕರ್, ಕಪಿಲ್‌ದೇವ್ ಹೆಸರೆಲ್ಲ ನೆನಪಿದೆ. ಈಗ ಹೊಸಬರು ಬಂದಿದ್ದಾರೆ. ಅವರ ಆಟಗಳನ್ನೂ ನೋಡುತ್ತೇನೆ. ಆದರೆ ಹೆಸರುಗಳನ್ನು ನೆನಪಿಡುವುದು ಕಷ್ಟ. ●